# ನವೊಮಿ ದಾಖಲೆ ಗಳಿಕೆ

ವಿಶ್ವದಲ್ಲೇ ಅತ್ಯಧಿಕ ಸಂಭಾವನೆ ಪಡೆಯುತ್ತಿರುವ ಮಹಿಳಾ ಅಥ್ಲೀಟ್ ಪಟ್ಟಿಯನ್ನು ಫೋರ್ಬ್ಸ್ ಬಿಡುಗಡೆ ಮಾಡಿದೆ. ಕಳೆದ ಜೂನ್‌ನಿಂದ ಈ ವರ್ಷದ (2020) ಜೂನ್‌ವರೆಗಿನ ಲೆಕ್ಕಾಚಾರ. ಜಪಾನಿನ ಟೆನಿಸ್ ತಾರೆ ನವೊಮಿ ಒಸಾಕಾ ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾಳೆ. ಈ ಅವಧಿಯಲ್ಲಿ ಆಕೆ ಪಡೆದ ಸಂಭಾವನೆ 37.4 ದಶಲಕ್ಷ ಡಾಲರ್! ಯಾವುದೇ ವರ್ಷವೊಂದರಲ್ಲಿ ಮಹಿಳಾ ಅಥ್ಲೀಟ್ ಒಬ್ಬರು ಪಡೆದ ಅತ್ಯಧಿಕ ಸಂಭಾವನೆಯಿದು. ಇದೊಂದು ಸಾರ್ವಕಾಲಿಕ ದಾಖಲೆ.

ಕಳೆದ 9 ವರ್ಷಗಳಿಂದ ಈ ರೀತಿ ಅತ್ಯಧಿಕ ಗಳಿಕೆಯ ಮಹಿಳಾ ಅಥ್ಲೀಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಇರುತ್ತಿದ್ದವರು ಟೆನಿಸ್ ತಾರೆ ಸೆರೆನಾ ವಿಲಿಯಮ್ಸ್ ಮತ್ತು ಮರಿಯಾ ಶರಪೋವಾ. ಸೆರೆನಾ ನಾಲ್ಕು ವರ್ಷಗಳಿಂದ ಅಗ್ರಸ್ಥಾನದಲ್ಲಿದ್ದಾಕೆ. ಈ ಸಲ ಸೆರೆನಾ ವಿಲಿಯಮ್ಸ್ ಎರಡನೇ ಸ್ಥಾನದಲ್ಲಿದ್ದಾಳೆ. ಆಕೆಯ ವಾರ್ಷಿಕ ಗಳಿಕೆ 36 ದಶಲಕ್ಷ ಡಾಲರ್.

ಫೋರ್ಬ್ಸ್ ಈ ಸಂಭಾವನೆಯನ್ನು ಲೆಕ್ಕ ಹಾಕುವಾಗ ಸಂಬಳ, ಬೋನಸ್, ಎಂಡಾರ್ಸ್‌ಮೆಂಟ್, ರಾಯಲ್ಟಿ ಮತ್ತು ಸಮಾರಂಭಗಳಲ್ಲಿ ಭಾಗವಹಿಸಲು ಪಡೆಯುವ ಹಣ– ಎಲ್ಲವನ್ನೂ ಸೇರಿಸುತ್ತದೆ. ಎಲ್ಲದರಲ್ಲೂ ನವೊಮಿ ಒಸಾಕಾ ಮುಂದಿದ್ದಾಳೆ. ನೈಕ್ ಕಂಪೆನಿಯ ಜೊತೆಗೆ ಕಳೆದ ವರ್ಷ ಆಕೆ 10 ದಶಲಕ್ಷ ಡಾಲರ್ ಒಪ್ಪಂದಕ್ಕೆ ಸಹಿ ಹಾಕಿದಳು. ಪ್ರಾಕ್ಟರ್ ಅಂಡ್ ಗ್ಯಾಂಬಲ್, ಆಲ್ ನಿಪ್ಪಾನ್ ಏರ್‌ವೇಸ್, ನಿಸ್ಸಾನ್ ಮುಂತಾಗಿ ಹಲವು ಪ್ರತಿಷ್ಠಿತ ಕಂಪೆನಿಗಳ ಜೊತೆಗೆ ಆಕೆ ಒಪ್ಪಂದಕ್ಕೆ ಸಹಿ ಹಾಕಿದ್ದಾಳೆ. 2021ಕ್ಕೆ ಮುಂದೂಡಲಾಗಿರುವ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ನವೊಮಿ ಜಪಾನ್ ತಂಡವನ್ನು ಪ್ರತಿನಿಧಿಸಲಿದ್ದಾಳೆ. ಹಾಗಾಗಿ ನಿಸ್ಸಾನ್ ದೊಡ್ಡ ಮೊತ್ತವನ್ನೇ ನೀಡಿದೆ.

ನವೊಮಿ ಈಗ ಹೊಸ ಗ್ಲೋಬಲ್ ಮಾರ್ಕೆಟಿಂಗ್ ಐಕಾನ್. ಮಾರುಕಟ್ಟೆಯಲ್ಲಿ ಈಕೆಯ ಬ್ರ್ಯಾಂಡ್ ಮೌಲ್ಯ ಒಂದೇ ಸಮನೆ ಏರುತ್ತಿದೆ. ಇದೆಲ್ಲವೂ ಒಮ್ಮಿಂದೊಮ್ಮೆಲೆ ಗಳಿಸಿದ್ದಲ್ಲ. ಹಂತ ಹಂತವಾಗಿ ಕಠಿಣ ಪರಿಶ್ರಮದಿಂದ ಗಳಿಸಿದ್ದು. ಅದರಲ್ಲೂ 2018ರ ಯುಎಸ್ ಓಪನ್ ಫೈನಲ್‌ನಲ್ಲಿ ವಿಶ್ವದ 'ನಂಬರ್ ಒನ್' ಆಟಗಾರ್ತಿ ಸೆರೆನಾ ವಿಲಿಯಮ್ಸ್‌ಳನ್ನು ಬಗ್ಗುಬಡಿದು ಟ್ರೋಫಿ ಕೈಗೆತ್ತಿಕೊಂಡ ಬಳಿಕ ನವೊಮಿ ಸ್ಟಾರ್‌ಡಮ್ ಗ್ರಾಫ್ ತೀವ್ರಗತಿಯಲ್ಲಿ ಏರಿತು. 38ರ ಹರೆಯದ 23 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದು ತುತ್ತತುದಿಯಲ್ಲಿದ್ದ ಸೆರೆನಾ, ಇನ್ನೂ 20ರ ಹರೆಯದ ಎಳೆಯ ಹುಡುಗಿಯ ಎದುರು ಅನುಭವಿಸಿದ ಈ ಪರಾಭವವನ್ನು ಅರಗಿಸಿಕೊಳ್ಳಲು ಆಗಲೇ ಇಲ್ಲ. ಅದಾಗಲೇ ವೃತ್ತಿಜೀವನದಲ್ಲಿ ಒಟ್ಟು 300 ದಶಲಕ್ಷ ಡಾಲರ್ ಮೌಲ್ಯದ ಆಸ್ತಿ ಹೊಂದಿದ್ದ ಸೆರೆನಾ ವಾರ್ಷಿಕ ಗಳಿಕೆಯಲ್ಲೂ ಮುಂದಿದ್ದಳು. ನವೊಮಿ ಎಂಟ್ರಿಯಿಂದ ಆಕೆಯ ಟೆನಿಸ್ ಅಂಕಣದ ಅಗ್ರಪಟ್ಟ ಕುಸಿಯಿತು. ಈಗ ವಾರ್ಷಿಕ ಗಳಿಕೆಯ ಲೆಕ್ಕದಲ್ಲೂ ನವೊಮಿ ನಂಬರ್ ಒನ್.

ಟೆನಿಸ್‌ನಲ್ಲಿ ಯಾವತ್ತೂ ಅಮೆರಿಕನ್ ಮತ್ತು ಯೂರೋಪಿಯನ್ನರ ಪಾರಮ್ಯವೇ ಹೆಚ್ಚು. ಈಗ ನವೊಮಿ ಹೆಸರಲ್ಲಿ ಎರಡು ದಾಖಲೆಗಳಿವೆ. ಯಾವುದೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದ ಜಪಾನಿನ ಮೊದಲ ಆಟಗಾರ್ತಿ ಈಕೆ. ಜೊತೆಗೆ ವಿಶ್ವ ಟೆನಿಸ್‌ನಲ್ಲಿ ಮೊದಲ ರ್‍ಯಾಂಕ್ ಪಡೆದಿರುವ ಏಷ್ಯಾದ ಮೊದಲ ಆಟಗಾರ್ತಿಯೂ ಹೌದು.



ಮದುವೆಯಾಗಿ ಮಗುವಾದ ಬಳಿಕವೂ ಟೆನಿಸ್ ಅಂಕಣದಲ್ಲಿ ತನ್ನ ಬಾಹುಬಲ ಮೆರೆದಾಕೆ ಸೆರೆನಾ. 1999ರಲ್ಲಿ ಸೆರೆನಾ ಮೊದಲ ಗ್ರ್ಯಾನ್‌ಸ್ಲಾಮ್ ಗೆದ್ದಾಗ ನವೊಮಿ ಇನ್ನೂ ಒಂದು ವರ್ಷದ ಪುಟ್ಟ ಮಗು. 19 ವರ್ಷದ ಬಳಿಕ ಸೆರೆನಾಳನ್ನೇ ಸೋಲಿಸಿ ತನ್ನ ಮೊದಲ ಯುಎಸ್ ಗ್ರ್ಯಾನ್ ಸ್ಲಾಮ್ ಪ್ರಶಸ್ತಿ ಗೆದ್ದವಳು ಒಸಾಕಾ! ಭಾರೀ ವಿವಾದ ಎಬ್ಬಿಸಿದ ಪಂದ್ಯವದು. ಆಟದಲ್ಲಿ ಬೀಪಿ ಏರಿಸಿಕೊಂಡು ಮೂರು ಸಲ ನಿಯಮ ಉಲ್ಲಂಘನೆಯ ನೋಟಿಸ್ ಪಡೆದಳು ಸೆರೆನಾ. ಆದರೆ ನವೊಮಿ ಮಾತ್ರ ತಣ್ಣಗೆ ತನ್ನ ಎಂದಿನ ಶಕ್ತಿಶಾಲಿ ಆಟವಾಡಿದ್ದಳು.

2015ರಲ್ಲಿ ಮರಿಯಾ ಶೆರಪೋವ 29.7 ದಶಲಕ್ಷ ಡಾಲರ್ ವಾರ್ಷಿಕ ಸಂಭಾವನೆ ಪಡೆದು ಆ ಕಾಲದ ದಾಖಲೆ ನಿರ್ಮಿಸಿದ್ದಳು. ಅದಕ್ಕೂ ಮುನ್ನ ಸಂಭಾವನೆಯಲ್ಲಿ ಸ್ಟೆಫಿ ಗ್ರಾಫ್ ಈ ರೀತಿಯ ಸ್ಟಾರ್‌ಡಮ್ ಪಡೆದದ್ದುಂಟು. ಅವರೆಲ್ಲರ ದಾಖಲೆಗಳನ್ನೂ ನವೊಮಿ ಮುರಿದಿದ್ದಾಳೆ.

2020ರ ಅತ್ಯಧಿಕ ಸಂಭಾವನೆ ಪಡೆಯುತ್ತಿರುವ ವಿಶ್ವದ 100 ಅಥ್ಲೀಟ್‌ಗಳ ಪಟ್ಟಿಯಲ್ಲಿ ನವೊಮಿ ಒಸಾಕಾ ಮತ್ತು ಸೆರೆನಾ ವಿಲಿಯಮ್ಸ್ ಇಬ್ಬರೂ ಸ್ಥಾನ ಪಡೆದಿದ್ದಾರೆ. ಒಸಾಕಾಳದ್ದು 29ನೇ ಸ್ಥಾನವಾದರೆ ಸೆರೆನಾಳದ್ದು 33ನೇ ಸ್ಥಾನ. ಹೀಗೆ ಇಬ್ಬರು ಮಹಿಳೆಯರು ಸ್ಥಾನ ಪಡೆದಿರುವುದು 2016ರ ಬಳಿಕ ಇದೇ ಮೊದಲು.

ಜಪಾನೀ ತಾಯಿ ಮತ್ತು ಹೈಟೀ ಅಮೆರಿಕನ್ ತಂದೆಯ ಪುತ್ರಿ ಈ ನವೊಮಿ. ಜಪಾನ್‌ನಲ್ಲಿ ಹುಟ್ಟಿ ಮೂರು ವರ್ಷ ಆಗಿದ್ದಾಗ ತಂದೆ ತಾಯಿ ಜೊತೆ ಅಮೆರಿಕದ ಲಾಂಗ್ ಐಲ್ಯಾಂಡ್‌ಗೆ ವಲಸೆ. ಅಲ್ಲಿಂದ ಫ್ಲೋರಿಡಾಗೆ. 16 ವರ್ಷ ಆಗುವುದಕ್ಕೆ ಒಂದು ತಿಂಗಳು ಮುನ್ನವೇ ವೃತ್ತಿಪರ ಟೆನಿಸ್‌ಗೆ ಪಾದಾರ್ಪಣೆ. 2016ರಲ್ಲಿ ವಿಶ್ವ ಟೆನಿಸ್ ಅಸೋಸಿಯೇಷನ್‌ನ (WTA) ಟಾಪ್ 40 ಪಟ್ಟಿಯಲ್ಲಿ ಸ್ಥಾನ ಪಡೆದಳು. 2018ರಲ್ಲಿ ಮೊದಲ ಇಂಡಿಯನ್ ವೆಲ್ಸ್ ಪ್ರಶಸ್ತಿಯ ಕಿರೀಟ. ಜಪಾನ್, ಅಮೆರಿಕ ದ್ವಿಪೌರತ್ವ ಹೊಂದಿರುವ ನವೊಮಿ ಬುದ್ಧಿವಂತಿಕೆಯಿಂದ ಒಲಿಂಪಿಕ್ಸ್‌ನಲ್ಲಿ ಜಪಾನ್ ದೇಶವನ್ನು ಪ್ರತಿನಿಧಿಸುತ್ತಿದ್ದಾಳೆ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65